ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಅಂತರ್ಜಲ ಪೂರ್ಣ ಅಂದಾಜು ಮಾಡಿಲ್ಲ. ಇದರ ಮಾಹಿತಿಯನ್ನು ತಯಾರಿಸಿ ಅಂತರ್ಜಲ ಉಪಯೋಗಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ).—ಸ್ವಾಮಿ, ಚಳ್ಳಕೆರೆ ತಾಲ್ಲೂಕು ಮಳೆ ಇಲ್ಲದ ಬರಡು ತಾಲ್ಲೂಕು. ಕೆಲವು ಪ್ರದೇಶಗಳಲ್ಲಿ ಅಂತರ್ ಜಲದಿಂದ ನೀರು ಸಿಗುವ ಅವಕಾಶ ಇದೆ. ಅಂತಹ ಜಾಗಗಳಲ್ಲಿ ಒಂದು ಸ್ಕೀಂ ಆಳವಡಿಸುವುದಾದರೆ, ಕೆಲವಾರು ರೈತರಿಗೆ ಬೆಳೆ ಬೆಳೆದುಕೊಂಡು ತಿನ್ನಲಿಕ್ಕೆ ಅನುಕೂಲವಾಗುತ್ತದೆ. ಇಲ್ಲಿಯ ಜನ ಬಹಳ ಕಷ್ಟದಲ್ಲಿ ಇದ್ದಾರೆ. ಆದುದರಿಂದ ಇಲ್ಲಿಯ ಜನಕ್ಕೆ ಆದಷ್ಟು ಸಹಾಯ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಚಳ್ಳಕೆರೆ ತಾಲ್ಲೂಕಿನಲ್ಲಿ ಭೂಗರ್ಭದಿಂದ ಜಲ ಸಿಕ್ಕುವುದು ಸಹಜ. ಈಗಾಗಲೇ ೨೧ ಯೋಜನೆಗಳು ಕಾರ್ಯರೂಪದಲ್ಲಿ ಇವೆ. ೧೯೩.೧೪ ಹೆಕ್ಟೇರ್ ಜಮೀನು ನೀರಾವರಿ ಆಗುವ ಸಾಧ್ಯತೆ ಇದೆ. ೪೦ ಲಕ್ಷ ರೂಪಾಯಿ ಹಣ ಖರ್ಚು ಮಾಡಿದ್ದೇವೆ. ಸಾಕಷ್ಟು ನೀರು ಭೂಗರ್ಭದಲ್ಲಿ ಸಿಕ್ಕುತ್ತದೆಂಬ ಅಭಿಪ್ರಾಯವೂ ಇದೆ. ಅದಕ್ಕಾಗಿ ಗಂಗಾ ಕಲ್ಯಾಣ ಯೋಜನೆಯ ವ್ಯಾಪ್ತಿಯಲ್ಲಿ, ೯ ಕೊಡೆ, ಭೂಗರ್ಭದಲ್ಲಿ ಸಿಗುವಂಥ ಜಲವನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಐಡೆಂಟಿಫೈ ಮಾಡಿದ್ದೇವೆ ಇಡೀ ತಾಲ್ಲೂಕಿನಲ್ಲಿ ಎಷ್ಟು ಸಿಕ್ಕುತ್ತದೆಂದು ಏಕಾಏಕಿ ಹೇಳುವುದು ಕಷ್ಟವಾಗುತ್ತದೆ. ನಾನು ನಿನ್ನೆ ಕೂಡ ಹೇಳಿದ್ದೇನೆ ಗಂಗಾ ಕಲ್ಯಾಣ ಯೋಜನೆಗೆ ಹೆಚ್ಚು ಅಸಕ್ತಿ ಕೊಡಬೇಕೆಂದು ಹೇಳಿದ್ದೇನೆ. ಈಗಾಗಲೇ ೯ ಕಡೆ ಐಡೆಂಟಿಫೈ ಮಾಡಿದ್ದೇವೆ, ಅದನ್ನು ಉಪಯೋಗ ಮಾಡಿ ಕೊಳ್ಳಲಾಗುವುದು ಎಂಬ ಮಾತನ್ನು ಹೇಳುತ್ತೇನೆ.

ಕಬಿನಿ ನದಿಯ ಶ್ರೀ ಶ್ರೀಕಂಠೇಶ್ವರ ದೇವಸ್ಥಾನದ ಸ್ನಾನಘಟ್ಟದ ಬಗ್ಗೆ

೧೩೫೯. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ನಂಜನಗೂಡು ಯಾತ್ರಾ ಸ್ಥಳವಾದ ಶ್ರೀ ಶ್ರೀಕಂಠೇಶ್ವರ ದೇವಸ್ಥಾನದ ಕಬಿನಿ ನದಿಯ ಸ್ನಾನ ಘಟ್ಟವನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ಸರ್ಕಾರದವರು ಕೈಗೊಂಡಿದ್ದಾರೆಯೇ ?

(ಆ) ಹಾಗಿದ್ದಲ್ಲಿ ಇದರ ಬಗ್ಗೆ ಕೃಷ್ಣರಾಜೇಂದ್ರಸಾಗರ ಸಂಶೋಧನಾ ಕೇಂದ್ರ ವರದಿ ಸಲ್ಲಿಸಿರುವುದೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಕೆಲಸದ ಅಂದಾಜು ವೆಚ್ಚ ಎಷ್ಟು ? ಮತ್ತು ಯಾವಾಗ ಈ ಕೆಲಸ ಪೂರ್ಣಗೊಳ್ಳುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

(ಅ) ಇಲ್ಲ

(ಆ) ವರದಿ ಬರಬೇಕಾಗಿದೆ

(ಇ) ವರದಿ ಬಂದ ನಂತರ ಅದಕ್ಕೆ ಅನುಗುಣವಾಗಿ ಅಂದಾಜನ್ನು ತಯಾರು ಮಾಡಲಾಗುತ್ತೆ, ಮುಂದಿನ ಕ್ರಮ ತದನಂತರ

ಶ್ರೀ ಹೆಚ್ ಡಿ. ದೇವೇಗೌಡ.—ಮಾನ್ಯ ಸದಸ್ಯರು ಸ್ನಾನಘಟ್ಟವನ್ನು ಸ್ವಚ್ಛಗೊಳಿಸಿ, ಸ್ನಾನಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿದ್ದಾರೆ. ಅಲ್ಲೆಲ್ಲಾ ಜೊಂಡು ಬೆಳೆದಿದೆ ಎಂಬುದು ಮೂಲ ಪ್ರಶ್ನೆ. ಇಲ್ಲಿ ನಾವು ನದಿ ಪಾತ್ರವನ್ನೂ ಬದಲಾಯಿಸಬೇಕಾಗಿದೆ. ಇದನ್ನು ಹೇಗೆ ಮಾಡಬೇಕೆಂಬ ಬಗ್ಗೆ ಕೆ. ಆರ್. ಎಸ್. ಸಂಶೋಧನಾ ಕೇಂದ್ರಕ್ಕೆ ಬರೆದಿದ್ದೇವೆ. ಈಗಾಗಲೇ ೧೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅವರಿಂದ ವರದಿ ಬಂದಮೇಲೆ, ಈ ವಿಚಾರವಾಗಿ ಸರ್ಕಾರ ನಿರ್ಣಯ ಮಾಡಂತ್ತವೆ.

ಶ್ರೀ ಡಿ. ಟಿ. ಜಯಕುಮಾರ್ —ಮಾನ್ಯ ದೇವೇಗೌಡರು ಪಂಸನ್ನು ಮಾಡಿದರೆ, ಇದೇನೂ ಕಷ್ಟವಾಗುವುದಿಲ್ಲ. ಸಾವಿರಾರು ಮಂದಿ ಸ್ನಾನಘಟ್ಟಕ್ಕೆ ಬಂದು ಅಸಹ್ಯಪಟ್ಟುಕೊಂಡು, ಸರ್ಕಾರವನ್ನು

ಬೈಯುತ್ತಾರೆ. ಹಿಂದೆ ಮಂತ್ರಿಗಳೂ, ಶಾಸಕರೂ, ಎಲ್ಲರೂ ಪ್ರಯತ್ನಪಟ್ಟಿದ್ದಾರೆ. ಎರಡು ವರ್ಷದಿಂದ ವರದಿಯನ್ನು ತರಿಸುವುದಕ್ಕಾಗಿಲ್ಲ. ತಕ್ಷಣ ವರದಿಯನ್ನು ತರಿಸಿಕೊಂಡು, ಹೆಚ್ಚು ಆಸಕ್ತಿ ವಹಿಸಿ ಈ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಒಂದು ವಾರದಲ್ಲಿ ಮಾಡತಕ್ಕಂಥ ಕೆಲಸ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಜಯಕರ್ನಾಟಕ ಮಾರ್ ಅವರು ಬಂದಮೇಲೆ ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದಾರೆ, ಹೆಚ್ಚು ಮುತುವರ್ಜಿ ವಹಿಸಿದ್ದಾರೆ. ನಾವೂ ಕೂಡ ಹೆಚ್ಚು ಮುತುವರ್ಜಿ ವಹಿಸಿ, ಕೃಷ್ಣರಾಜಸಾಗರ ಸಂಶೋಧನಾ ಕೇಂದ್ರದವರಿಗೆ ತಿಳಿಸುತ್ತೇವೆ. ಅಲ್ಲಿಂದ ವರದಿ ಬಂದಮೇಲೆ ಸರ್ಕಾರ ನಿರ್ಣಯ ಮಾಡುತ್ತದೆ.

ಧಾರವಾಡ ಜಿಲ್ಲೆ ಲಕ್ಷ್ಮೇಶ್ವರದಲ್ಲಿರುವ ಹಳೆಯ ಕೋಟೆಯ ಬಗ್ಗೆ

೧೬೩೧ ಶ್ರೀ ಟಿ. ಬಿ. ಬಾಳಿಕಾಯಿ (ಶಿರಹಟ್ಟಿ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಧಾರವಾಡ ಜಿಲ್ಲೆ ಲಕ್ಷ್ಮೇಶ್ವರದಲ್ಲಿ ಹಳೆಯದಾದ ಮಣ್ಣಿನ ನಿಷ್ಪ್ರಯೋಜಕ ಕೋಟೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ ಸದರಿ ಹಳೆಯ ಮಣ್ಣಿನ ಹಾಳು ಕೋಟೆಯ ಒಳಗಡೆಯ ವಿಸ್ತಾರವಾದ ಜಾಗದಲ್ಲಿ ಮುನಸೀಫ್ ಹಾಗೂ ಉಪ-ಖಜಾನೆ, ಪೋಲೀಸರ ವಸತಿಗಳಿದ್ದು, ಸಬ್‌ಜೈಲ್ ಸಾಕ್ಷದಾರರಿಗೆ ವಿಶ್ರಮಿಸಲಿಕ್ಕೆ ಕಟ್ಟಡ, ಉಪ-ಖಜಾನೆ ಕಟ್ಟಿಸಲು ಸರ್ಕಾರದವರು ಈ ಮೊದಲು ಯೋಚಿಸಿದ್ದರೆ ?

(ಇ) ಹಾಗಿದ್ದಲ್ಲಿ ಇದು ಯಾವ ಹಂತದಲ್ಲಿದೆ ಹಾಗೂ ಎಂದು ಕಾರ್ಯಗತಗೊಳ್ಳುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

(ಅ) ಗಮನಕ್ಕೆ ಬಂದಿದೆ

(ಆ) ಪೋಲೀಸ್ ವಸತಿ ಗೃಹ ಕಟ್ಟಡಗಳ ಕೆಲಸ ತೆಗೆದುಕೊಂಡಿದ್ದು, ಕೆಲಸ ಮುಂಗಿಯಂಥ ಹಂತದಲ್ಲಿದೆ. ಇತರೇ ಕಟ್ಟಡಗಳು ಕಟ್ಟಿಸಲು ಸರ್ಕಾರಕ್ಕೆ ಯಾವ ಯೋಜನೆಯು ಇಲ್ಲಿಯವರೆಗೆ ಇಲ್ಲ.

(ಇ) ಉದ್ಭವಿಸುವುದಿಲ್ಲ

ಶ್ರೀ ಟಿ.ಬಿ. ಬಾಳಿಕಾಯಿ,—ಮಾನ್ಯ ಅಧ್ಯಕ್ಷರೇ ಲಕ್ಷ್ಮೇಶ್ವರದ ಕೋಟೆ ಕೇವಲ ಹಾಳು ಮಣ್ಣಿನ ಕೋಟೆಯಿಂದ ಆವೃತವಾಗಿದೆ. ಒಂದು ನೂರು ಎಕರೆ ಜಾಗ ಇದೆ. ಅದು ಸಬ್ ಜೈಲ್, ಉಪ-ಖಜಾನೆಯ ಜಾಗ. ಕೋರ್ಟಿಗೆ ಬರತಕ್ಕಂಥ ಕಕ್ಷಿದಾರರು, ಸಾಕ್ಷಿದಾರರು ನಿಲ್ಲುವುದಕ್ಕೆ ವ್ಯವಸ್ಥೆ ಆಗಬೇಕು. ೧೯೭೫-೭೬ನೇ ಇಸವಿಯಲ್ಲೇ ಇದರ ಬಗ್ಗೆ ಕಳುಹಿಸಿ ಕೊಟ್ಟಿದ್ದೆವು. ಇದುವರೆಗೂ ಆಗಿಲ್ಲ. ಆದ್ದರಿಂದ ದಯವಾಡಿ ಲೋಕೋಪಯೋಗಿ ಮಂತ್ರಿಗಳು, ಇದರ ಬಗ್ಗೆ ಆಲೋಚನೆ ಮಾಡಿ, ಕಟ್ಟಡದ ವ್ಯವಸ್ಥೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).— ಸಬ್ ಜೈಲು ವಿಚಾರದಲ್ಲಿ ಮಾನ್ಯ ಗೃಹ ಮಂತ್ರಿಗಳಾದ ರಾಚಯ್ಯನವರು ಕಟ್ಟಬೇಕೆಂದರೆ, ನಾನು ಅದನ್ನು ಮಾಡಬಹುದು. ಏಕೆಂದರೆ ಹಣವನ್ನು ಕೊಡುವವರು ಅವರು. ಆಮೇಲೆ ಕೋರ್ಟ್ ಕಟ್ಟಬೇಕೆಂದರೆ ಮಾನ್ಯ ಲಕ್ಷ್ಮೀಸಾಗರ್ ಅವರು ಕೊಡುತ್ತೇವೆಂದರೆ, ಅದನ್ನೂ ಮಾಡಬಹುದು. ಪರಿಸ್ಥಿತಿ ಇಷ್ಟು. ಜಾಗವನ್ನು ಉಪಯೋಗ ಮಾಡಿಕೊಂಡರೆ, ಸಾರ್ವಜನಿಕ ಕಟ್ಟಡ ಆಗುತ್ತವೆಂದು ಹೇಳಿದ್ದೀರಿ. ಇದರ ಬಗ್ಗೆ ಹಿಂದೆ ಅಂದಾಜು ಆಗಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದು ತರಿಸಿಕೊಳ್ಳುತ್ತೇನೆ. ಹಣಕಾಸಿನ ಚೌಕಟ್ಟಿನಲ್ಲಿ ಏನಾದರೂ ಸ್ವರೂಪ ಕೊಡುವುದಕ್ಕೆ ಸಾಧ್ಯತೆ ಇದ್ದರೆ ಪ್ರಯತ್ನ ಮಾಡುತ್ತೇನೆ